ದಿನಾಂಕ 17-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಯು.ಕೆ.ವೈ. ವಕೀಲರಿಂದ</u>

ನಾನು ಅಕ್ಟೋಬರ್ 2024 ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ತುರ್ವಿಹಾಳದ ಎಂ.ಹೆಚ್.ಪಿ.ಎಸ್. ಪ್ರಾಥಮಿಕ ಸಹಶಿಕ್ಷಕರೆಂದು ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ನಿವೃತ್ತಿಯಾಗುವ ಕಾಲಕ್ಕೆ ನಿವ್ವಳ ವೇತನ ಅಂದಾಜು 80 ಸಾವಿರದವರೆಗೆ ಬರುತ್ತಿತ್ತು. ನಮ್ಮ ಮನೆತನದ ಹಿರಿತನ ನಾನೇ ಮಾಡುತ್ತಿದ್ದೆ. ನನ್ನ ಕುಟುಂಬಕ್ಕೆ ಯಾವುದೇ ಜಮೀನು ಇಲ್ಲ. ಮುಂದುವರೆದು ಸಾಕ್ಷಿ ಮುಂಡರಗಿ ತಾಲೂಕಿನ ವೆಂಕಟಾಪುರ ಗ್ರಾಮದಲ್ಲಿ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಇಲ್ಲಿಯವರೆಗೂ ನಮ್ಮ ಮಧ್ಯೆ ಪಾಲು ವಿಭಾಗ ಆಗಿರುವುದಿಲ್ಲ. ಆ ಕುರಿತು ನ್ಯಾಯಾಲಯದಲ್ಲಿ ದಾವೆ ಚಾಲ್ತಿ ಇದೆ. ಸದರಿ ಜಮೀನಿನಿಂದ ಯಾವುದೇ ಆದಾಯ ಇರುವುದಿಲ್ಲ. ನನ್ನ ಮಗ ಪ್ರತಾಪಗೌಡ ಇವರು ಎಂ.ಬಿ.ಎ. ವ್ಯಾಸಂಗ ಮಾಡಿರುತ್ತಾರೆ. ಸುಮಾರು 2 ವರ್ಷಗಳ ಹಿಂದೆ ಪದವಿ ಪೂರ್ಣಗೊಳಿಸಿರುತ್ತಾರೆ. ಆತನ ವಿದ್ಯಾಭ್ಯಾಸದ ಖರ್ಚು ವೆಚ್ಚ ನಾನೇ ನೋಡಿಕೊಳ್ಳುತ್ತಿದ್ದೆ. ನನ್ನ ಮಗನ 1 ವರ್ಷದ ವಿದ್ಯಾಭ್ಯಾಸದ ಖರ್ಚು 2 ಲಕ್ಷದವರೆಗೂ ಆಗುತ್ತಿತ್ತು. ಮುಂದುವರೆದು ಸಾಕ್ಷಿ ಶಿಕ್ಷಣದ ಸಾಲ ಮಾಡಿ ಓದಿಸಿದ್ದೇನೆಂದು ನುಡಿಯುತ್ತಾರೆ. ಸದರಿ ಶಿಕ್ಷಣದ ಸಾಲವನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಪಡೆದುಕೊಂಡಿದ್ದೆ. ಯಾವ ವರ್ಷ ಎಂದು ನನಗೆ ನೆನಪಿಲ್ಲ. ಶಿಕ್ಷಣದ ಸಾಲದ ಕಂತುಗಳನ್ನು ನಾನೇ ಭರಿಸುತ್ತಿದ್ದೆ. ಒಂದು ಕಂತು ಎಷ್ಟು ಮೌಲ್ಯದ್ದು ಇತ್ತು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ವಾದಿ ನಂ. 1(ಬಿ) ಇವರು 2024 ರಲ್ಲಿ ಎಂ.ಎಸ್ಸಿ. ಬಿ.ಎಡ್ ವ್ಯಾಸಂಗ ಮುಗಿಸಿರುತ್ತಾರೆ. ಸದರಿ ವಾದಿ ನಂ. 1(ಬಿ) ಇವರು ಎಂ.ಎಸ್ಸಿ ಬಿ.ಎಡ್‌ನ್ನು ಪೇಪೆಂಟ್ ಸೀಟಿನಲ್ಲಿ ಓದಿರುತ್ತಾರೆ. ಅವರು ವಿದ್ಯಾಭ್ಯಾಸದ ಖರ್ಚು ವೆಚ್ಚ ಸಹಿತ ನಾನೇ ಭರಿಸಿದ್ದೆ. ವರ್ಷಕ್ಕೆ ಅಂದಾಜು ಒಂದುವರೆ ಲಕ್ಷದವರೆಗೂ ಖರ್ಚು ಬರುತ್ತಿತ್ತು. ವಾದಿ ನಂ. 1(ಬಿ) ಇವರು ವರ್ಷಕ್ಕೆ 60 ಸಾವಿರದಂತೆ ಒಟ್ಟು ರೂ. 1,20,000/- ಗಳನ್ನು ಪೇಪೆಂಟ್ ಸೀಟ್‌ಗಾಗಿ ನೀಡಿ ವಿದ್ಯಾಭ್ಯಾಸ ಮಾಡಿಸಿರುತ್ತೇನೆ. ವಾದಿ ನಂ. 1(ಬಿ) ಇವರ ವಿದ್ಯಾಭ್ಯಾಸಕ್ಕೆ ನಾನು ಬ್ಯಾಂಕ್‌ನಲ್ಲಿ ಸಾಲ ಮಾಡಿರಲಿಲ್ಲ.

ನನ್ನ ಮನೆತನದ ವ್ಯವಹಾರ ನಾನೇ ಮಾಡುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಿ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

ಸಿಂಧನೂರು.